ದಿನಾಂಕ: 17.01.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎಂ.ವಿ. ವಕೀಲರಿಂದಃ**

ನನ್ನ ತಂದೆ 2004 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ತೀರಿಕೊಂಡ ಕುರಿತು ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತೇನೆ ನನ್ನ ತೀರಿಕೊಂಡ ದಿನಾಂಕ ಮತ್ತು ತಿಂಗಳು ಹೇಳಲು ಬರುವುದಿಲ್ಲ. ನಾವು ಆರು ಜನ ಮಕ್ಕಳು. ಎಲ್ಲರಿಗೂ ಮದುವೆಯಾಗಿರುತ್ತದೆ. ನನ್ನ ತಂದೆಗೆ ಐದು ಜನ ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು. ಒಟ್ಟು ನಾಲ್ಕು ಜಮೀನುಗಳಿವೆ. ಉಳಿದ ಜಮೀನು ಸ್ವಂತ ಕ್ರಯಕ್ಕೆ ಪಡೆದುಕೊಂಡದ್ದು ಏಳು ಎಕರೆ ಜಮೀನು ಇದೆ ಪಿತ್ರಾರ್ಜಿತ ಆಸ್ತಿ ದಿಂಡಾವರ ಸರ್ವೆ. ನಂ. 39, 9 ಎಕರೆ 05 ಗುಂಟೆ ಆಗಿರುತ್ತದೆ. ದಾವಾ ಆಸ್ತಿಗಳ ಚಕ್ಕು ಬಂದಿ ಹೇಳಲು ಬರುತ್ತದೆ.

ನಾವು ಮತ್ತು ಕುಟುಂಬಸ್ತರು ಸುಮಾರು 200 ವರ್ಷಗಳಿಂದ ದಾವಾ ಆಸ್ತಿಯಲ್ಲಿ ಜಂಟಿ ಸ್ವಾಧೀನದಲ್ಲಿರುತ್ತೇವೆ. ನನ್ನ ತಾತ ದಾವಾ ಆಸ್ತಿಯ ಸ್ವಾಧೀನ ಇದ್ದು ನಂತರ ನಾನು ಅನುಭವಿಸಿಕೊಂಡು ಬಂದಿರುತ್ತೇವೆ. ನಮ್ಮ ತಂದೆ 1989 ರಲ್ಲಿ ಅವರ ಹೆಸರಿಗೆ ಜಂಟಿ ಮಾಡಿಕೊಂಡಿರುತ್ತಾರೆ. ದಾವಾ ಆಸ್ತಿಯು ಮೂಲತಃ ನನ್ನ ತಾತನ ಅಣ್ಣನ ಹೆಸರಿನಲ್ಲಿ ಇರುತ್ತದೆ. ನಾನು ದಾಖಲಾತೆಗಳನ್ನು ನೋಡಿರುತ್ತೇನೆ. ಯಾಯಾವ ದಾಖಲಾತಿಗಳನ್ನು ನೋಡಿದೆನೆಂದು ಈಗ ನನಗೆ ನೆನಪಿಲ್ಲ. ನಾವು ಮತ್ತು ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿದ್ದವೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತ್ಯೇಕ ಪ್ರತ್ಯೇಕವಾಗಿ

ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದರೆ ನಿಜ. ದಾವಾ ಆಸ್ತಿಯಲ್ಲಿ ಪ್ರತ್ಯೇಕವಾಗಿ ಭಾಗಮಾಡಿಕೊಂಡು ಅನುಭವಿಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರೆಲ್ಲ ನನ್ನ ಅಣ್ಣತಮ್ಮಂದಿರೆಂದರೆ ನಿಜ.

ದಾವಾ ಆಸ್ತಿಯನ್ನು ಜಂಟಿಯಾಗಿ ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದು ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಮ್ಯುಟೇಷನ್ ಹಾಜರು ಪಡಿಸಿದ್ದೇವು ಎಂದು ಹೇಳುತ್ತಾರೆ. ಮ್ಯುಟೇಷನ್ ಹೊರತು ಪಡಿಸಿ ಬೇರೆಬೇರೆ ದಾಖಲತಿಗಳನ್ನು ಹಾಜರು ಪಡಿಸಿರುತ್ತೇನೆ.

ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ ಅಂಶ ಸುಳ್ಳು ಎಂದರೆ ಸರಿಯಲ್ಲ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸಂಪೂರ್ಣ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು** ಈಗಾಗಲೆ ಸಾಕಷ್ಟು **ಸಮಯಕಾಶವನ್ನು ನೀಡಿದ್ದರಿಂದ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ಪಡರಿಗಣಿಸಲಾಯಿತು. ನೀಡಿ ಮುಂದೂಡಲಾಯಿತು.**
**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು